11) ಸಮಿತಿಯ ಎಸ್.ಡಿ.ಎಂ.ಸಿ. ಸದಸ್ಯರಾಗಲಿ, ಗ್ರಾಮ ಪಂಚಾಯಿತಿ ಸದಸ್ಯರಾಗಲಿ ಅಥವಾ ಇತರೆ ಸದಸ್ಯರು ಹೊಸ ಚುನಾವಣೆ ಅಥವಾ ಇನ್ನಾವುದೇ ಕಾರಣಕ್ಕೆ ಬದಲಾದಲ್ಲಿ ಗ್ರಾಮ ಪಂಚಾಯಿತಿಯ ಎಲ್ಲಾ ಸದಸ್ಯರು ಮತ್ತು ಸಮಿತಿಯ ಎಲ್ಲಾ ಸದಸ್ಯರು ಸಭೆ ಸೇರಿ ಹೊಸ ಸದಸ್ಯರನ್ನು ಆಯ್ಕೆ ಮಾಡಿ ಅನುಮೋದನೆ ಮಾಡುವುದು.

### ಬಾಲಕಾರ್ಮಿಕರು

- 14 ವರ್ಷದೊಳಗಿನ ಯಾವ ಮಕ್ಕಳು ಶಾಲೆಯಿಂದ ಹೊರಗಡೆ ಇದ್ದಾರೆಯೋ ಅವರೆಲ್ಲರೂ ಬಾಲ ಕಾರ್ಮಿಕರು.

### ಸಂವಿಧಾನಾತ್ಮಕವಾಗಿ ಮತ್ತು ಮೂಲಭೂತವಾಗಿ : ಮಕ್ಕಳ ಹಕ್ಕುಗಳು

- ಪ್ರೀತಿ, ವಿಶ್ವಾಸ, ಬಾಲ್ಯ, ರಕ್ಷಣೆ, ಶಿಕ್ಷಣ, ವಸತಿ, ಮನರಂಜನೆ, ಪೋಷಣೆ, ಆರೋಗ್ಯ, ಪೌಷ್ಠಿಕ, ಆಹಾರ, ಆಟ–ಪಾಠ, ಭಾಗವಹಿಸುವುದು, ಅಭಿಪ್ರಾಯ, ಮೆಚ್ಚುಗೆ, ಅವಕಾಶ, ಸಂತೋಷ, ಕುಟುಂಬದೊಂದಿಗೆ ಇರುವುದು.

**1989 ರ ವಿಶ್ವಸಂಸ್ಥೆಯ ಒಡಂಬಡಿಕೆ ಪ್ರಕಾರ ಮತ್ತು ಅದಕ್ಕೆ 1992 ರಲ್ಲಿ ಡಿಸೆಂಬರ್ 11 ರಂದು ಭಾರತ ಸರ್ಕಾರ ಸಹಿ ಮಾಡಿರುವಂತೆ ಮಕ್ಕಳಿಗೆ ನೀಡಬೇಕಾದ ಹಕ್ಕುಗಳು.**

1) ಬದುಕುವ ಹಕ್ಕು 2) ರಕ್ಷಣೆಯ ಹಕ್ಕು 3) ಅವಕಾಶ ಮತ್ತು ವಿಕಾಸ ಹೊಂದುವ ಹಕ್ಕು 4) ಭಾಗವಹಿಸುವ ಹಕ್ಕು.

### ನಿಮಗೆ ತಿಳಿದಿರಲಿ

1) 1986 ರ ಬಾಲಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ ಪ್ರಕಾರ ಅಪಾಯಕಾರಿ ಕ್ಷೇತ್ರದಲ್ಲಿ ಮಕ್ಕಳ ದುಡಿಮೆ ನಿಷೇಧ. ಒಂದು ವೇಳೆ ದುಡಿಸಿದಲ್ಲಿ ಮಾಲೀಕರಿಗೆ 10 ಸಾವಿರ ದಂಡ ಮತ್ತು ಮೂರು ವರ್ಷ ಜೈಲು.
2) 1996 ರ ಸುಪ್ರೀಂಕೋರ್ಟ್ ತೀರ್ಪು ಪ್ರಕಾರ 14 ವರ್ಷದೊಳಗಿನ ಮಕ್ಕಳನ್ನು ಅಪಾಯಕಾರಿ ಕ್ಷೇತ್ರದಲ್ಲಿ ದುಡಿಸುವುದು ನಿಷೇಧ. ಒಂದು ವೇಳೆ ದುಡಿಸಿದಲ್ಲಿ ಮಾಲೀಕರಿಗೆ 20 ಸಾವಿರ ದಂಡ.
3) 1997 ರ ಕರ್ನಾಟಕ ಹೈಕೋರ್ಟ್ ತೀರ್ಪು ಪ್ರಕಾರ 12 ವರ್ಷದೊಳಗಿನ ಯಾವುದೇ ಮಕ್ಕಳನ್ನು ಯಾವುದೇ ಕಾರಣಕ್ಕೂ ಯಾವುದೇ ಕ್ಷೇತ್ರದಲ್ಲಿ ದುಡಿಸುವುದನ್ನು ನಿಷೇಧಿಸಲಾಗಿದೆ.
4) 1961 ರ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಪ್ರಕಾರ ಅಂಗಡಿ ಮತ್ತು ವಾಣಿಜ್ಯ ಮಳಿಗೆಗಳಲ್ಲಿ ಮಕ್ಕಳ ಕೆಲಸ ನಿಷೇಧ.
5) ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ರ ಪ್ರಕಾರ 18 ವರ್ಷದೊಳಗಿನ ಹುಡುಗಿಗೆ ಹಾಗೂ 21 ವರ್ಷದೊಳಗಿನ ಹುಡುಗರಿಗೆ ಮದುವೆ ಮಾಡುವುದು, ಮಾಡಿಸುವುದು, ಸಾಕ್ಷಿಯಾಗುವುದು ಮತ್ತು ಭಾಗಿಯಾಗುವುದು ಶಿಕ್ಷಾರ್ಹ ಅಪರಾಧ. ಪೂಜಾರಿ ಸೇರಿದಂತೆ ಸಂಬಂಧಪಟ್ಟವರಿಗೆಲ್ಲ 1 ಲಕ್ಷ ರೂ. ದಂಡ ಹಾಗೂ 2 ವರ್ಷ ಜೈಲು.





### ನಿಮಗೆ ಗೊತ್ತಿದೆಯೇ ?

1) ಸಂವಿಧಾನದ ಲೇಖನ 21 ರ ಪ್ರಕಾರ ಎಲ್ಲರಿಗೂ ಬದುಕುವ ಹಕ್ಕು ಇದೆ.
2) ಸಂವಿಧಾನದ ಲೇಖನ 21 ಎ ಪ್ರಕಾರ 6-14 ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣ ಮೂಲಭೂತ ಹಕ್ಕು.
3) ಸಂವಿಧಾನದ ಲೇಖನ 34 ರ ಪ್ರಕಾರ ಪೋಷಕರು ಕುಟುಂಬ ನಡೆಸಲು ಮಕ್ಕಳನ್ನು ಬಳಸಬಾರದು.
4) 1976 ರ ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ ಪ್ರಕಾರ ಯಾವುದೇ ಮಕ್ಕಳನ್ನು ನಾಗರಿಕರನ್ನು ಜೀತಕ್ಕೆ / ಸಂಬಳಕ್ಕೆ ಇಡುವಂತಿಲ್ಲ.
5) ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯ್ದೆ 2009 ರ ಪ್ರಕಾರ 14 ವರ್ಷದೊಳಗಿನ ಎಲ್ಲ ಮಕ್ಕಳು ಕಡ್ಡಾಯವಾಗಿ ಶಿಕ್ಷಣವನ್ನು ಪಡೆಯಲೇಬೇಕು.

### ನಿಮಗೆ ಗೊತ್ತಿರಲಿ

1) ಮಕ್ಕಳನ್ನು ದುಡಿಸುವುದರಿಂದ ಯಾವ ಬಡ ಕುಟುಂಬವೂ ಉದ್ಧಾರವಾಗಿಲ್ಲ.
2) ಬಾಲಕಾರ್ಮಿಕ ಪದ್ಧತಿ ಇರುವುದರಿಂದಲೇ ಬಡತನ, ಅನಕ್ಷರತೆ, ನಿರುದ್ಯೋಗ, ಜನಸಂಖ್ಯೆ ಜಾಸ್ತಿಯಾಗುತ್ತಿದೆ.
3) "**ಶಿಕ್ಷಣ**" ಇರುವುದು ಮತ್ತು ಮಕ್ಕಳನ್ನು ಶಾಲೆಗೆ ಕಳುಹಿಸುವುದು. ಸರ್ಕಾರಿ ಕೆಲಸಕ್ಕೋಸ್ಕರ ಅಲ್ಲ. ಬದಲಾಗಿ ಶೋಷಣೆ, ದೌರ್ಜನ್ಯ, ದಬ್ಬಾಳಿಕೆ, ಮೋಸಗಳಿಗೆ ಬಲಿಯಾಗದೆ ಉತ್ತಮ ನಾಗರಿಕನಾಗಿ ಈ ಸಮಾಜದಲ್ಲಿ ಎಲ್ಲರಂತೆ ಸ್ವಾಭಿಮಾನದಿಂದ ಬದುಕಲು ಹಾಗೂ ಅಭಿವೃದ್ಧಿ ಹೊಂದಲು.
4) ಒಂದು ವೇಳೆ ನೀವು 14 ವರ್ಷದೊಳಗಿನ ಮಕ್ಕಳನ್ನು ಶಾಲೆಗೆ ಕಳುಹಿಸುವುದನ್ನು ಬಿಟ್ಟು ಬೇರೆ ಯಾವುದೇ ರೀತಿಯಲ್ಲಿ ಕೆಲಸ, ದುಡಿಮೆ, ಕೂಲಿ, ಸಂಬಳಕ್ಕೆ ಇಟ್ಟಲ್ಲಿ ಪೋಷಕರೇ ... ತಂದೆ–ತಾಯಿಯರೇ .... ನೀವೂ ಕಾನೂನು ದೃಷ್ಟಿಯಲ್ಲಿ ಅಪರಾಧಿಗಳು. ಸಂವಿಧಾನದ ಲೇಖನ 51 (ಎ) (ಕೆ) ಪ್ರಕಾರ ಮಕ್ಕಳನ್ನು ಶಾಲೆಗೆ ಕಳುಹಿಸುವುದು ನಿಮ್ಮ ಕರ್ತವ್ಯ ಮತ್ತು ಜವಾಬ್ದಾರಿ.
5) ಮಾಲೀಕರೇ .... ನೀವೂ ನಿಮ್ಮ ಮನೆ, ಹೊಲ–ಗದ್ದೆ, ಅಂಗಡಿ, ಕೈಗಾರಿಕೆ, ಗ್ಯಾರೇಜ್ ಅಥವಾ ಯಾವುದೇ ರೀತಿಯಲ್ಲಿ ಮಕ್ಕಳನ್ನು ದುಡಿಸಿದಲ್ಲಿ ಅಥವಾ ಯಾವುದೇ ರೀತಿಯಲ್ಲಿ ದುರುಪಯೋಗಪಡಿಸಿದಲ್ಲಿ ಮೇಲೆ ತಿಳಿಸಿದ ಹಲವಾರು ಕಾಯ್ದೆ, ಕಾನೂನು, ನೀತಿ ನಿಮ್ಮನ್ನು ಶಿಕ್ಷಿಸದೇ ಬಿಡಲಾರದು. ಅದಕ್ಕಾಗಿ ಎಲ್ಲಾ ಮಕ್ಕಳಿಗೂ ನಿಮ್ಮ ಮಕ್ಕಳಂತೆ ಪ್ರೀತಿ, ಬಾಲ್ಯ, ಶಿಕ್ಷಣ, ರಕ್ಷಣೆ ನೀಡಿ, ಆ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿ.

**ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು**
ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ
ರಾಯಚೂರು ಜಿಲ್ಲೆ, ರಾಯಚೂರು.

**ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,**
ಜಿಲ್ಲಾ ಪಂಚಾಯಿತಿ,
ರಾಯಚೂರು ಜಿಲ್ಲೆ, ರಾಯಚೂರು.

unicef

# ಮಕ್ಕಳ ಕಾವಲು ಸಮಿತಿ ಕೈಪಿಡಿ

"ಇಂದಿನ ಮಕ್ಕಳು ಇಂದಿನ ಪ್ರಜೆಗಳು"

ಕರ್ನಾಟಕ ಸರ್ಕಾರ

## ರಾಯಚೂರು ಗ್ರಾಮ ಪಂಚಾಯ್ತಿ ಮತ್ತು ನಗರಸಭೆಯ ವಾರ್ಡ್ ಮಟ್ಟದಲ್ಲಿ ಮಕ್ಕಳ ಕಾವಲು ಸಮಿತಿ ರಚನೆ ಹಾಗೂ ಅದರ ಕಾರ್ಯ ಚಟುವಟಿಕೆ ಕುರಿತು ಕೈಪಿಡಿ



**ಪ್ರಕಟಣೆ :**
ಜಿಲ್ಲಾಡಳಿತ (✆ 229011), ಜಿಲ್ಲಾ ಪಂಚಾಯತ್ (✆ 228448), ನಗರಸಭೆ (✆ 231631), ಪೊಲೀಸ್ ಇಲಾಖೆ (✆ 235100), ಕಾರ್ಮಿಕ ಇಲಾಖೆ (✆ 226368), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (✆ 226292), ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘ (✆ 227581), ಸಾರ್ವಜನಿಕ ಶಿಕ್ಷಣ ಇಲಾಖೆ, ರಾಯಚೂರು ಹಾಗೂ ಯುನಿಸೆಫ್ "ಮಕ್ಕಳ ಸಂರಕ್ಷಣಾ" ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು. (✆ 230610)

ಕರ್ನಾಟಕ ರಾಜ್ಯ ಪೊಲೀಸ್

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ, ಎಲ್ಲರೂ ಬೆಳೆಯೋಣ

## ಮಕ್ಕಳ ಕಾವಲು ಸಮಿತಿ - Child Rights Protection Committee (CRPC)

- ಈ ಸಮಿತಿಯನ್ನು ಪಂಚಾಯತ್ ರಾಜ್ ತಿದ್ದುಪಡಿ ಕಾಯ್ದೆ 1993 ರಂತೆ ಪರಿಚ್ಛೇದ 61 (ಎ) ಯಂತೆ ಸಾಮಾನ್ಯ ಸಮಿತಿ ಅಡಿಯಲ್ಲಿ ಉಪ ಸಮಿತಿಯಾಗಿ ರಚಿಸುವುದು.
- ಈ ಸಮಿತಿಯನ್ನು ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರ ಆದೇಶದಂತೆ (9-2-2007 ಮ.ಮ.ಆ.ಇ./ಮ.ಕ./ಮ.ಸಾ.ಸ. 15-6-2007) ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ತಡೆ ಸಮಿತಿಯ ಭಾಗವಾಗಿ ಹೆಚ್ಚಿನ ಸದಸ್ಯರನ್ನೊಳಗೊಂಡು ಮಕ್ಕಳ ಸಮಗ್ರ ಅಭಿವೃದ್ಧಿ ಹಾಗೂ ಸಂರಕ್ಷಣೆ ದೃಷ್ಟಿಯಲ್ಲಿ ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಕೈಗೆತ್ತಿಕೊಂಡು ಪಂಚಾಯತಿಯಿಂದಲೇ ಬಗೆಹರಿಸಲು ಮಕ್ಕಳ ಕಾವಲು ಸಮಿತಿಯನ್ನು ರಚಿಸುವುದು.

### ಗುರಿ

- ಸಂಪೂರ್ಣ ಬಾಲಕಾರ್ಮಿಕ, ಬಾಲ್ಯವಿವಾಹ ಮುಕ್ತ ಗ್ರಾಮ ಪಂಚಾಯಿತಿ / ನಗರಸಭೆಯ ವಾರ್ಡ್‌ನ್ನಾಗಿ ಮಾಡುವುದು ಮತ್ತು ತನ್ನ ಗ್ರಾಮದ / ವಾರ್ಡಿನ ಎಲ್ಲಾ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ ಅವರ ಹಕ್ಕನ್ನು ಅವರೇ ಅನುಭವಿಸುವಂತೆ ಮಾಡುವುದು.

### ಉದ್ದೇಶಗಳು

- ತನ್ನ ಗ್ರಾಮ ಪಂಚಾಯಿತಿ ಹಾಗೂ ನಗರಸಭೆ ವ್ಯಾಪ್ತಿಯ ವಾರ್ಡ್‌ಗಳ ಮಟ್ಟದಲ್ಲಿ 14 ವರ್ಷದೊಳಗಿನ ಎಲ್ಲಾ ಮಕ್ಕಳು ಶಾಲೆಯಲ್ಲಿರುವಂತೆ ಮಾಡುವುದು.
- ದುಡಿಮೆ / ಜೀತ / ಕೂಲಿ / ಸಂಬಳ ಮತ್ತು ಮನೆ ಕೆಲಸದಲ್ಲಿರುವ ಎಲ್ಲಾ 14 ವರ್ಷದೊಳಗಿನ ಮಕ್ಕಳನ್ನು ಗುರುತಿಸಿ, ದುಡಿಮೆಯಿಂದ ಬಿಡಿಸಿ, ಶಾಲೆಗೆ ಕರೆತರುವುದು.
- ತನ್ನ ಗ್ರಾಮ ಮಟ್ಟದಲ್ಲಿ ಯಾವುದೇ ಮಹಿಳೆಯರ, ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ಆಗದಂತೆ ನೋಡುವುದು.
- ತನ್ನ ಗ್ರಾಮದ / ವಾರ್ಡ್‌ಗಳಲ್ಲಿನ ಎಲ್ಲಾ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಸೌಲಭ್ಯಗಳು ಇರುವಂತೆ ಮಾಡುವುದು.
- ಬಾಲ್ಯವಿವಾಹ ಮುಕ್ತ ಗ್ರಾಮ ಪಂಚಾಯಿತಿಯನ್ನಾಗಿ ಮಾಡುವುದು.

### ಕಾರ್ಯ ಚಟುವಟಿಕೆ (16 ಅಂಶದ ಕಾರ್ಯಕ್ರಮ)

1) ಸಂಪೂರ್ಣ **"ಬಾಲಕಾರ್ಮಿಕ ಮುಕ್ತ"** ಪಂಚಾಯಿತಿ / ವಾರ್ಡ್‌ನ್ನಾಗಿ ಮಾಡುವುದು. ಆ ಹಿನ್ನೆಲೆಯಲ್ಲಿ ಚಟುವಟಿಕೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
2) ತಮ್ಮ ಗ್ರಾಮ ಪಂಚಾಯಿತಿ ಹಾಗೂ ನಗರಸಭೆಯ ವಾರ್ಡ್ ವ್ಯಾಪ್ತಿಗೆ ಬರುವ 14 ವರ್ಷದೊಳಗಿನ ಎಲ್ಲಾ ಮಕ್ಕಳು ಶಾಲೆಯಲ್ಲಿರುವಂತೆ ಮಾಡುವುದು.





3) ಪಂಚಾಯತ್ ರಾಜ್ ಅಧಿನಿಯಮ 1993 ರಂತೆ ಅಧ್ಯಾಯ 4 ಪರಿಚ್ಛೇಧ 58 (1ಎ -V) ರಂತೆ ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತ ಪಡಿಸಿಕೊಳ್ಳುವುದು.
4) 10 ನೇ ತರಗತಿ ತನಕ ಯಾವುದೇ ಶಾಲೆಯಲ್ಲಿ ಯಾವುದೇ ಮಕ್ಕಳು ಶಾಲೆ ಬಿಡದಂತೆ ನೋಡುವುದು. ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದು.
5) ಎಲ್ಲಾ ಶಾಲೆಗಳಲ್ಲಿ SDMC (School Development and Monitoring Committee) ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ ಕೆಲಸ ಮಾಡುವಂತೆ ಮಾಡಿ, ಅದು ಪ್ರತಿ ತಿಂಗಳು ಸಭೆ ಸೇರಿ ಶಾಲೆಯ, ಮಕ್ಕಳ ಸಮಸ್ಯೆಗಳ ಬಗ್ಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳುವಂತೆ ಮಾಡುವುದು.
6) ಪ್ರತಿ **"ಗ್ರಾಮ ಸಭೆ"**ಯಲ್ಲಿ ಮತ್ತು ನಗರಸಭೆಯ ವಾರ್ಡ್ ಸಮಿತಿ ಸಭೆಯಲ್ಲಿ ದುಡಿಯುವ, ಸಂಬಳಕ್ಕೆ ಜೀತ, ಕೂಲಿ, ಕೆಲಸ ಮಾಡುತ್ತಿರುವ ಮಕ್ಕಳನ್ನು ಗುರುತಿಸಿ, ಬಾಲಕಾರ್ಮಿಕ ಮಕ್ಕಳ ಬಗ್ಗೆ ಚರ್ಚಿಸಿ ಆ ನಿಟ್ಟಿನಲ್ಲಿ ತೀರ್ಮಾನ ಕೈಗೊಂಡು, ಮಕ್ಕಳನ್ನು ಕೆಲಸದಿಂದ ಬಿಡುಗಡೆಗೊಳಿಸಿ ಶಾಲೆಗೆ ಕರೆತರುವುದು. ಮತ್ತು ಅದನ್ನು **"ಗ್ರಾಮ ಸಭೆ"** ನಡಾವಳಿಕೆ ಪುಸ್ತಕದಲ್ಲಿ ದಾಖಲಿಸುವುದು.
7) ತಮ್ಮ ಪಂಚಾಯತ್‌ನಲ್ಲಿ ಮಹಿಳೆ ಮತ್ತು ಮಕ್ಕಳಿಗೆ ಸಂಬಂಧಿಸಿದ ಅಂಕಿ ಸಂಖ್ಯೆಗಳನ್ನು ಫಲಕಗಳ ಮೂಲಕ ಭಿತ್ತರಿಸುವುದು.
8) ಪ್ರತಿ ಶಾಲೆಯಲ್ಲಿ **"ಮಕ್ಕಳ ಹಕ್ಕು"**ಗಳ ಕುರಿತು ಗೋಡೆ ಬರಹ ರಚಿಸಿ ಆ ಕುರಿತು ಮಕ್ಕಳಿಗೆ ನಿರಂತರ ಮಾಹಿತಿ ನೀಡುವ ಕಾರ್ಯಗಳನ್ನು ಮಾಡುವುದು.
9) ಪ್ರಾರಂಭದ 3 ತಿಂಗಳ ನಿರಂತರ ಕೆಲಸದ ನಂತರ, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರತಿ ಶಾಲೆಯಲ್ಲಿ "ಮಕ್ಕಳ ಹಕ್ಕುಗಳ ಕ್ಲಬ್"ಗಳನ್ನು ರಚಿಸಿ ಆ ಮೂಲಕ ಎಲ್ಲಾ ಶಾಲಾ ಚಟುವಟಿಕೆಗಳು ಕ್ಲಬ್ ಮುಖಾಂತರ ನಡೆಸಿಕೊಂಡು ಹೋಗುವಂತೆ ಈ ಸಮಿತಿ ಹಾಗೂ ಗ್ರಾಮ ಪಂಚಾಯಿತಿ ನೋಡುವುದು.
10) ಶಾಲೆಯಲ್ಲಿ ನಡೆಯುವ ಎಲ್ಲಾ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳು ಮಕ್ಕಳಿಂದ ಕೇಂದ್ರೀಕೃತವಾಗುವಂತೆ, ಅವರ ಅಭಿಪ್ರಾಯಕ್ಕೆ ಮನ್ನಣೆ ನೀಡಿ ಕ್ರಮ ಕೈಗೊಳ್ಳುವುದು ಮತ್ತು ಅವರಿಗೆ ಇಷ್ಟವಾಗುವಂತೆ ಮಾಡಲು ಕ್ರಮ ಕೈಗೊಳ್ಳುವುದು.
11) ಶಾಲೆಗಳಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳು ಇರುವಂತೆ ಮಾಡುವುದು. (ಸಾಕಷ್ಟು ಕೊಠಡಿ, ಪೀಠೋಪಕರಣಗಳು, ಗ್ರಂಥಾಲಯ, ಮೈದಾನ, ಕಲಿಕಾ ಸಾಮಗ್ರಿ, ವಿಜ್ಞಾನ ಉಪಕರಣ ಇತ್ಯಾದಿ)
12) ಪಂಚಾಯಿತಿ ಮತ್ತು ನಗರಸಭೆಯ ವಾರ್ಡ್‌ಗಳಲ್ಲಿ ಅಭಿವೃದ್ಧಿಪರ ಯೋಜನೆಗಳು, ಅಗತ್ಯವಿರುವ ಕುಟುಂಬಗಳಿಗೆ ಮತ್ತು ಬಾಲಕಾರ್ಮಿಕ ಮಕ್ಕಳ ಕುಟುಂಬಗಳಿಗೆ ನೀಡಿ ಆ ಮಕ್ಕಳು ಶಾಲೆಗೆ ಬರುವಂತೆ ಮಾಡುವುದು.
13) ಪ್ರತಿ 3 ತಿಂಗಳಿಗೊಮ್ಮೆ ನಡೆಸಿರುವ ಕೆಲಸದ ಬಗ್ಗೆ ಮೌಲ್ಯಮಾಪನ ಮಾಡುವುದು.
14) 18 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಮತ್ತು 21 ವರ್ಷದೊಳಗಿನ ಗಂಡು ಮಕ್ಕಳಿಗೆ ಮದುವೆಯಾಗದಂತೆ ನೋಡಿ **"ಬಾಲ್ಯ ವಿವಾಹ"**ಗಳು ಆಗದಂತೆ ನೋಡುವುದು.
15) ತನ್ನ ಪಂಚಾಯಿತಿಗೆ ಒಳಪಟ್ಟ, ಶಾಲೆ ಬಿಟ್ಟ, ದುಡಿಯುವ ಮಕ್ಕಳನ್ನು ಗುರುತಿಸಿ ಅವರ ಪೋಷಕರಿಗೆ, ಮಾಲೀಕರಿಗೆ, ತಿಳಿಹೇಳಿ ಶಾಲೆಗೆ ಕರೆತಂದು ತನ್ನ ಗ್ರಾಮದಲ್ಲಿರುವ ಎಲ್ಲಾ ಮಕ್ಕಳು ಶಾಲೆಗೆ ಬರುವಂತೆ ಮಾಡುವುದು. ತಪ್ಪಿದಲ್ಲಿ ಮಾಲೀಕರ, ಪೋಷಕರ ಮೇಲೆ ಕಾನೂನು ಕ್ರಮ ಕೈಗೊಳ್ಳುವುದು.
16) ಮಹಿಳೆಯರ ಹಾಗೂ ಮಕ್ಕಳ ಸಾಗಾಣಿಕೆ ಮತ್ತು ಮಾರಾಟವನ್ನು ತಡೆಯುವುದು.

### ಸಮಿತಿ ರಚಿಸುವ ವಿಧಾನ

ಈ ಸಮಿತಿಗಳು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ನಿಂದ ನಿರ್ದೇಶಿತವಾಗಿದೆ ಗ್ರಾಮ ಪಂಚಾಯಿತಿ ಮಟ್ಟದ ಮಹಿಳಾ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟ ಸಮಿತಿಯಂತೆ ಕಾನೂನು ಬದ್ಧವಾಗಿ ರಚಿಸುವುದು.

1) ಈ ಸಮಿತಿಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಎಲ್ಲಾ ಸದಸ್ಯರು, ಸ್ಥಳೀಯ ಶಾಲೆಗಳ 2 ಎಸ್.ಡಿ.ಎಂ.ಸಿ. ಸದಸ್ಯರು, 2 ಶಾಲಾ ಶಿಕ್ಷಕರು, 4 ಜನ ಯುವಕ ಸಂಘದ ಸದಸ್ಯರು, 4 ಮಂದಿ ಮಹಿಳಾ ಸಂಘದ ಸದಸ್ಯರು, ಗ್ರಾಮ ಪಂಚಾಯಿತಿಯ ಒಬ್ಬರು ಪ್ರೇರಕರು. ಎಲ್ಲಾ ಹಳ್ಳಿಯ ಒಬ್ಬರು ಅಂಗನವಾಡಿ ಕಾರ್ಯಕರ್ತರು ಮತ್ತು ಪಿ.ಡಿ.ಓ. ಸದಸ್ಯರಾಗಿ ಇರುತ್ತಾರೆ. ಒಟ್ಟು 25 ರಿಂದ 30 ಮಂದಿ ಸದಸ್ಯರು.
2) ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಈ ಸಮಿತಿಯ ಅಧ್ಯಕ್ಷರಾಗಿ ಹಾಗೂ ಪಿ.ಡಿ.ಓ. (ಪಂಚಾಯಿತಿ ಅಭಿವೃದ್ಧಿ ಅಧಿಕಾರಿ) ಯವರು ಈ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಾರೆ.
3) ಪ್ರತಿ ಗುಂಪಿನಿಂದ ಸದಸ್ಯರನ್ನು ಆರಿಸುವಾಗ (ಎಸ್.ಡಿ.ಎಂ.ಸಿ. ಶಾಲಾ ಶಿಕ್ಷಕರು, ಯುವಕರು, ಮಹಿಳಾ ಸದಸ್ಯರು) ಆ ವಾರ್ಡ್ / ಪಂಚಾಯಿತಿಗೆ ಒಳಪಟ್ಟ ಎಲ್ಲಾ ಗುಂಪುಗಳನ್ನು ಪ್ರತ್ಯೇಕವಾಗಿ ಸಭೆ ಕರೆದು, ತರಬೇತಿ ನಡೆಸಿ ಆ ತರಬೇತಿಯಲ್ಲಿ ಮೇಲೆ ತಿಳಿಸಿರುವಂತೆ ಸದಸ್ಯರನ್ನು ಆಯ್ಕೆ ಮಾಡುವುದು.
4) ಮೇಲೆ ತಿಳಿಸಿದಂತೆ ಆಯ್ಕೆಯಾದ ಎಲ್ಲಾ ಸದಸ್ಯರು ಮತ್ತು ಆ ಪಂಚಾಯಿತಿಯ ಎಲ್ಲಾ ಸದಸ್ಯರು, ಅಧ್ಯಕ್ಷರು, ಪಿ.ಡಿ.ಓ.ರವರು ಸಭೆ ಸೇರಿ ಈ ಸಮಿತಿಯನ್ನು ಪಂಚಾಯಿತಿಯಲ್ಲಿ ಅಂಗೀಕರಿಸಿ, ಅನುಮೋದಿಸಿ ಪಂಚಾಯತ್ ರಾಜ್ ತಿದ್ದುಪಡಿ ಕಾಯ್ದೆ 1993 ರಂತೆ ಪರಿಚ್ಛೇಧ 61 ಎ ಅಡಿಯಲ್ಲಿ ಕಾನೂನು ಬದ್ಧವಾಗಿ ರಚಿಸುವುದು. ಪಂಚಾಯಿತಿ ಕಛೇರಿಯಲ್ಲಿ ತೀರ್ಮಾನ ಕೈಗೊಳ್ಳುವುದು. ಇದು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಮಿತಿಯ ಅಡಿಯಲ್ಲಿ ಉಪ ಸಮಿತಿಯಾಗಿ ಕಾರ್ಯ ನಿರ್ವಹಿಸುವುದು.
5) ಈ ತೀರ್ಮಾನವನ್ನು ಗ್ರಾಮ ಪಂಚಾಯಿತಿಯಲ್ಲಿ ಪ್ರತ್ಯೇಕವಾಗಿ **"ಮಕ್ಕಳ ಕಾವಲು ಸಮಿತಿ"** ನಡಳಿಕೆ ಪುಸ್ತಕ ಮತ್ತು ಕಡತವನ್ನು ತಯಾರಿಸಿ ದಾಖಲಿಸುವುದು.
6) ಈ ನಡವಳಿಕೆ ಪುಸ್ತಕ ಮತ್ತು ಕಡತ (File) ವನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ತಯಾರಿಸಿ ಪಂಚಾಯತ್‌ನಲ್ಲಿ ಇಡುವುದು.
7) ಈ ನಡವಳಿಕೆಗೆ ಪಂಚಾಯಿತಿ ಅಧ್ಯಕ್ಷರು ಮತ್ತು ಜಿ.ಡಿ.ಓ. ಸಹಿ ಮಾಡಿ, ನಂತರ ಎಲ್ಲಾ ಸದಸ್ಯರು (ಸಮಿತಿಯ) ಸಹಿ ಮಾಡುವುದು. ಪ್ರಥಮ ಸಮಿತಿಯ ಅನುಮೋದನೆಗೆ ಸಭೆಯಲ್ಲಿ ಹಾಜರಿದ್ದ ಎಲ್ಲ ಸದಸ್ಯರು ಸಹಿ ಮಾಡಬೇಕು. ಈ ವರದಿಯ ಪ್ರತಿಯನ್ನು ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕರಿಗೆ ಕಳುಹಿಸುವುದು.
8) ಈ ಸಮಿತಿಯು ಪ್ರತಿ ತಿಂಗಳಿಗೊಮ್ಮೆ ಸಭೆ ಸೇರಿ ಕ್ರಮ ಕೈಗೊಂಡು ವರದಿಯನ್ನು ಜಿಲ್ಲಾಧಿಕಾರಿಗಳು ಜಿಲ್ಲಾ ಪಂಚಾಯತ್‌ಗೆ ಕಳುಹಿಸುವುದು.
9) ಎಲ್ಲಾ ಪತ್ರ ವ್ಯವಹಾರ ಪಿ.ಡಿ.ಓ. ಮತ್ತು ಅಧ್ಯಕ್ಷರ ಮುಖೇನ ಆಗಬೇಕು. ಇದಕ್ಕೆ ಸ್ಥಳೀಯ ಪ್ರೇರಕರು, ಅಂಗನವಾಡಿ ಸದಸ್ಯರ ಅಥವಾ ಸ್ಥಳೀಯ ಸಂಸ್ಥೆಗಳ ಸಹಾಯ ಪಡೆಯಬಹುದಾಗಿದೆ.
10) ಇದಕ್ಕೆ ಸಂಬಂಧಿಸಿದ ನಡವಳಿಕೆ ಪುಸ್ತಕ (File) ಕಡತಗಳನ್ನು ಸುಸ್ಥಿತಿಯಲ್ಲಿ ಕಾಪಾಡುವುದು. ಪಿ.ಡಿ.ಓ. ರವರ ಜವಾಬ್ದಾರಿಯಾಗಿದೆ.

